

# 'ಚುಂಬಕ' ಹೀರೊ

ಚುಂಬನದ ವಿಷಯ ಬಂದರೆ ಬಾಲಿವುಡ್‌ನಲ್ಲಿ ಎಲ್ಲರೂ ನೆನಪಿಸಿಕೊಳ್ಳುವ ಹೆಸರು ಇಮ್ರಾನ್ ಹಶ್ಮಿಯದ್ದು. ಸರಣಿಯೋಪಾದಿಯಲ್ಲಿ ತೆರೆಯ ಮೇಲೆ ಹೀರೋಯಿನ್‌ಗಳಿಗೆ ಕಿಸ್ ಹೊಡೆದು ದಾಖಲೆ ನಿರ್ಮಿಸಿದ್ದಾನೆ ಈ ಹಶ್ಮಿ.

ಆದರೆ ಚುಂಬನದ ವಿಷಯದಲ್ಲಿ ಹಶ್ಮಿಯನ್ನೂ ಮೀರಿಸಲು ಇದೀಗ ಹೃತಿಕ್ ರೋಶನ್ ಹೊರಟಿದ್ದಾನೆ. ಬಾಲಿವುಡ್‌ನ ಅತ್ಯಧಿಕ ಸುಂದರಾಂಗ ನಟನೆಂದೇ ಖ್ಯಾತಿ ಹೊಂದಿರುವ ಹೃತಿಕ್ 'ನೈಟ್ ಅಂಡ್ ಡೇ' ಎಂಬ ಹಾಲಿವುಡ್‌ನ ಸಿನಿಮಾದ ರಿಮೇಕ್ ಹಿಂದಿ ಚಿತ್ರದಲ್ಲಿ ಕತ್ರೀನಾ ಕೈಫ್ ಜತೆ ದೀರ್ಘ ಚುಂಬನದ ದೃಶ್ಯದಲ್ಲಿ ಭಾಗವಹಿಸಿರುವ ಸುದ್ದಿ ಬಂದಿದೆ. ಹೃತಿಕ್‌ಗೆ ಚುಂಬನದ ದೃಶ್ಯಗಳು ಹೊಸತಲ್ಲ. ಆತ ಭಾಗವಹಿಸಿದ ಚುಂಬನದ ದೃಶ್ಯಗಳ ದಾಖಲೆ ಏನೆಂದರೆ 'ಅತ್ಯಂತ ದೀರ್ಘ ಚುಂಬನ' ಎಂಬ ಖ್ಯಾತಿ. ಈ ಹಿಂದೆ 'ಧೂಮ್-2' ಚಿತ್ರದಲ್ಲಿ ಐಶ್ವರ್ಯ ರೈ ಜತೆ ಹೃತಿಕ್ ಚುಂಬನದ ದೃಶ್ಯದಲ್ಲಿ ಭಾಗವಹಿಸಿದ್ದು ದೊಡ್ಡ ಸುದ್ದಿಯಾಗಿತ್ತು. ವಿವಾಹಿತ ನಟನೊಬ್ಬ ಬಚ್ಚನ್ ಕುಟುಂಬದ ಸೊಸೆ (ಆಗಿನ್ನೂ ಐಶ್ವರ್ಯಳ ಮದುವೆ ಆಗಿರಲಿಲ್ಲ.)ಯ ಜತೆಗೆ ದೀರ್ಘ ಚುಂಬನ ನಡೆಸಿದ್ದು ಬಾಲಿವುಡ್ ಪತ್ರಿಕೆಗಳ ವರ್ಣರಂಜಿತ ವರದಿಗಳಿಗೆ ದೊಡ್ಡ ಗ್ರಾಸವಾಗಿತ್ತು. ಆ ಬಳಿಕ 'ಕೈಟ್' ಚಿತ್ರದಲ್ಲೂ ಹೃತಿಕ್ ದೀರ್ಘ ಚುಂಬನ ನಡೆಸಿ, ಅಭಿಮಾನಿಗಳ ಅಚ್ಚರಿಗೆ ಕಾರಣನಾಗಿದ್ದ.

'ಅಗ್ನಿಪಥ್' ಚಿತ್ರದಲ್ಲಿ ಪ್ರಿಯಾಂಕಾ ಚೋಪ್ರಾ ಜತೆಗೆ ಹೃತಿಕ್ ದೀರ್ಘ ಚುಂಬನ ನಡೆಸಿದ್ದಾನೆ ಎಂದು ಚಿತ್ರದ ಬಿಡುಗಡೆಗೆ ಮುನ್ನ ಸುದ್ದಿ ಹಬ್ಬಿತ್ತು. 'ಅಂತಹ ದೃಶ್ಯಗಳಿಲ್ಲ' ಎಂದು ಹೃತಿಕ್ ಸ್ಪಷ್ಟನೆ ನೀಡಿದ್ದ. ಪತ್ರಿಕಾಗೋಷ್ಠಿಯೊಂದರಲ್ಲಿ ಮಹಿಳಾ ಪತ್ರಕರ್ತೆಯೊಬ್ಬಳು 'ಪ್ರಿಯಾಂಕಾ ಜತೆಗಿನ ಚುಂಬನದ ದೃಶ್ಯ ಹೇಗಿತ್ತು?' ಎಂದು ಪಟ್ಟು ಹಿಡಿದು ಪ್ರಶ್ನೆ ಕೇಳಿದ್ದಳು. 'ಅಂತಹ ದೃಶ್ಯಗಳು ಆ ಚಿತ್ರದಲ್ಲಿ ಇಲ್ಲ' ಎಂದು ಹೃತಿಕ್ ಹೇಳಿದರೂ ಆಕೆಯ ಪ್ರಶ್ನೆ ಮುಂದುವರಿದಿತ್ತು. ತಕ್ಷಣ ಹೃತಿಕ್, 'ಮೇಡಂ, ಇಷ್ಟು ಹೇಳಿದರೂ ನೀವು ನನ್ನನ್ನು ನಂಬುತ್ತಿಲ್ಲ ಎಂದರೆ ನಿಮಗೆ ಕಿಸ್ ಬಗ್ಗೆ ಏನೂ ಗೊತ್ತಿಲ್ಲ ಎಂದಾಯಿತು. ದಯವಿಟ್ಟು ಇಲ್ಲಿ ಮುಂದೆ ಬಂದರೆ ಕಿಸ್ ಹೇಗಿರುತ್ತದೆ ಎಂಬುದನ್ನು ತೋರಿಸುತ್ತೇನೆ' ಎಂದಾಗ, ಆಕೆ ದಿಗ್ಮೂಢಳಾಗಿದ್ದಳು.

ಇದೀಗ ಕತ್ರೀನಾ ಕೈಫ್ ಜತೆಗಿನ ಹೊಸ ಸಿನಿಮಾದಲ್ಲಿ ಹೃತಿಕ್‌ನ ದೀರ್ಘಚುಂಬನದ ದೃಶ್ಯ ಸಖತ್ತಾಗಿ ಮೂಡಿ ಬಂದಿದೆಯಂತೆ. ಮೂಲ ಇಂಗ್ಲಿಷ್ ಚಿತ್ರದಲ್ಲಿ ನಟಿಸಿದ್ದ ಟಾಮ್ ಕ್ರೂಸ್‌ಮತ್ತು ಕ್ಯಾಮರೂನ್ ಡಯಾಸ್ ಕೂಡಾ ದೀರ್ಘಚುಂಬನ ನಡೆಸಿದ್ದರು.



## ಕಿರುತೆರೆಯಲ್ಲಿ ಅನಿಲ್

ಅನಿಲ್ ಕಪೂರ್ ದಿನ ಕಳೆದಂತೆ ಮತ್ತಷ್ಟು 'ಯಂಗ್' ಆಗಿದ್ದಾರೆ. ಒಂದೆಡೆ 24ರ ಹರೆಯದ ಅನಿಲ್‌ನ ಮಗಳು ಸೋನಂ ಕಪೂರ್ ಹೀರೋಯಿನ್ ಆಗಿ ಮಿಂಚುತ್ತಿದ್ದರೆ, ಇನ್ನೊಂದೆಡೆ 53ರ ಹರೆಯದ ಅನಿಲ್ ಕೂಡಾ ಸಿನಿಮಾಗಳಲ್ಲಿ ಹೀರೊ ಆಗಿಯೇ ಮೆರೆಯುತ್ತಿದ್ದಾರೆ. ಆತನ ಮುಖದ 'ಚಾಕೊಲೇಟ್ ಹೀರೊ' ಕಳೆ ಇನ್ನೂ ಮಾಸಿಲ್ಲ.

ಈ ಮಧ್ಯೆ ಅನಿಲ್ ಕಪೂರ್ ಕಿರುತೆರೆಗೆ ದಾಳಿ ಇಟ್ಟಿರುವ ಸುದ್ದಿ ಬಂದಿದೆ. '24' ಎನ್ನುವ ಹೆಸರಿನ ಹೊಸ ಟೀವಿ ಸೀರಿಯಲ್ ಒಂದನ್ನು ಸ್ವತಃ ಅನಿಲ್ ನಿರ್ಮಿಸಿ, ಅದರಲ್ಲಿ ಮುಖ್ಯ ಪಾತ್ರದಲ್ಲಿ ನಟಿಸಲಿದ್ದಾನೆ. ಅಮೆರಿಕದ ಕಿರುತೆರೆಯಲ್ಲಿ ಇದೇ ಹೆಸರಿನಲ್ಲಿ ಪ್ರಖ್ಯಾತವಾದ ಸೀರಿಯಲ್‌ಅನ್ನೇ ಈಗ ಹಿಂದಿಗೆ ತರಲಾಗುತ್ತಿದೆ. ಭಾರತೀಯ ಟೀವಿ ಸೀರಿಯಲ್‌ಗಳಲ್ಲೇ ಅತ್ಯಧಿಕ ವೆಚ್ಚದ ಸೀರಿಯಲ್ ಇದಾಗಲಿದೆಯಂತೆ.

ವ್ಯಕ್ತಿಯೊಬ್ಬನ ಜೀವನದ 24 ಗಂಟೆಗಳ ಅವಧಿಯನ್ನು ಈ ಸೀರಿಯಲ್‌ನಲ್ಲಿ ಥ್ರಿಲ್ಲರ್ ಕಥೆಯನ್ನಾಗಿ ರೂಪಿಸಲಾಗಿದೆ. ಪ್ರತಿದಿನ ಒಂದು ಗಂಟೆಯ ಅವಧಿಯಲ್ಲಿ ಏನೇನು ನಡೆಯುತ್ತದೋ ಅದು ಆ ದಿನದ ಸೀರಿಯಲ್‌ನಲ್ಲಿ ಬರುತ್ತದೆ. ಈ 'ರಿಯಲ್‌ಟೈಮ್' ಸ್ಟೋರಿಯದ್ದು ಒಟ್ಟು 24 ಧಾರಾವಾಹಿಗಳು. 'ಡೆಲ್ಲಿ ಬೆಲ್ಲಿ' ಎಂಬ ವಿಭಿನ್ನ, ಹಿಟ್ ಸಿನಿಮಾವನ್ನು ನಿರ್ದೇಶಿಸಿದ ಅಭಿನಯ್ ಡಿಯೊ ಈ ಸೀರಿಯಲ್‌ಅನ್ನು ನಿರ್ದೇಶಿಸುತ್ತಿದ್ದಾನೆ. 'ಕಲರ್ಸ್' ಚಾನೆಲ್ ನಲ್ಲಿ ಬರಲಿರುವ ಈ ಸೀರಿಯಲ್ ಇಂಗ್ಲಿಷಿನ ಅಧಿಕೃತ ರಿಮೇಕ್ ಆದರೂ, ಭಾರತೀಯ ಸನ್ನಿವೇಶಕ್ಕೆ ತಕ್ಕಂತೆ ಹಲವು ಬದಲಾವಣೆಗಳನ್ನು ಮಾಡಲಾಗಿದೆಯಂತೆ.

■ ಬಿಂದು